ಮಾತುಕತೆ ಮಾಡುತ್ತಿದ್ದೇನೆ. ಈ ದಿಸೆಯಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ಆ ಆಸ್ಪತ್ರೆಗಳಿಗೆ ಕಳುಹಿಸಿಕೊಡತಕ್ಕಂಥ ಕೆಲಸ ಮಾಡಬೇಕು. ಈಗ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೂ ಕೂಡ ಒಂದು ವೇಳೆ ನಮ್ಮ ಹತ್ತಿರ ಸಿಗದಿದ್ದರೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವುದಕ್ಕೆ ಅವಕಾಶ ಇದೆ.

ಕೃಷ್ಣರಾಜಪೇಟೆ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹೆಚ್ಚುವರಿ ವಿಜ್ಞಾನ ವಿಭಾಗಕ್ಕೆ ಉಪನ್ಯಾಸಕರನ್ನು ನೇಮಕ ಮಾಡುವುದು

244 (2069) ಶ್ರೀ ಕೆ.ಬಿ. ಚಂದ್ರಶೇಖರ್ (ಕೆ.ಆರ್.ಪೇಟೆ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣರಾಜಪೇಟೆ ಕ್ಷೇತ್ರ ಕೃಷ್ಣರಾಜಪೇಟೆ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪಿ.ಯು.ಸಿ. ವಿಜ್ಞಾನ ತರಗತಿಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಈಗಾಗಲೇ ಹೆಚ್ಚುವರಿ ವಿಜ್ಞಾನ ವಿಭಾಗ (ಪಿ.ಸಿ.ಎಂ.ಬಿ.) ಮಂಜೂರು ಮಾಡಿದ್ದು, ತರಗತಿಗಳು ಪ್ರಾರಂಭವಾಗಿದ್ದು, ಈ ವಿಭಾಗಕ್ಕೆ ಯಾವಾಗ ಉಪನ್ಯಾಸಕರ ಹುದ್ದೆ ಮಂಜೂರು ಮಾಡಲಾಗುವುದು;

ಆ) ಈಗಾಗಲೇ ಹುದ್ದೆ ಮಂಜೂರಾಗಿ ಉಪನ್ಯಾಸಕರ ನೇಮಕವಾಗಿದೆಯೇ ತಿಳಿಸುವುದು?

ಮಾನ್ಯ ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೆಚ್ಚುವರು ವಿಜ್ಞಾನ ವಿಭಾಗ (ಪಿ.ಸಿ.ಎಂ.ಬಿ.) ಮಂಜೂರು ಮಾಡಿರುವುದಿಲ್ಲ. ಮಂಜೂರಾದ ನಂತರ ಉಪನ್ಯಾಸಕರ ಹುದ್ದೆ ಮಂಜೂರು ಮಾಡಲಾಗುವುದು.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ.ಬಿ. ಚಂದ್ರಶೇಖರ್ :- ಮಾನ್ಯ ಅಧ್ಯಕ್ಷರೇ, ಕೆ.ಆರ್.ಪೇಟೆ ತಾಲ್ಲೂಕಿನ ಪದವಿಪೂರ್ವ ಕಾಲೇಜಿನಲ್ಲಿ ಪಿ.ಯು.ಸಿ. ತರಗತಿಯಲ್ಲಿ ಒಟ್ಟು 800 ಜನ ವಿದ್ಯಾರ್ಥಿಗಳು ಅಲ್ಲಿ ಇದ್ದಾರೆ. ಅದಕ್ಕೆ ಅಡಿಷನಲ್ ಆಗಿ ಒಂದು ಸೆಕ್ಷನ್ ಮಾಡಿಕೊಡಿ ಎಂದು ಹೇಳಿ ಕಳೆದ ಸಾರಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ ಮೇಲೆ ಅವರು ಮಂಜೂರಾತಿ ಮಾಡಿಕೊಡಬೇಕೆಂದು ಹೇಳಿ ಸಂಬಧಪಟ್ಟ ಇಲಾಖೆಗೆ ಆದೇಶವನ್ನು ಕೊಟ್ಟಿದ್ದರು. ಅದು ಇವತ್ತಿನವರೆಗೂ ಮಂಜೂರಾತಿ ಆಗಿಲ್ಲ. ಆದರೆ ಕಾಲೇಜಿನವರು ಮಂಜೂರಾತಿ ಆಗಿದೆ ಎಂದು ಹೇಳಿ ಅಡಿಷನಲ್ ಸೆಕ್ಷನ್ ಅನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಈಗ ನನಗೆ ಕೊಟ್ಟಿರತಕ್ಕಂಥ ಉತ್ತರದಲ್ಲಿ ಹೆಚ್ಚುವರಿ ವಿಜ್ಞಾನ ವಿಭಾಗ ಮಂಜೂರು ಮಾಡಿರುವುದಿಲ್ಲ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ; ಆದ್ದರಿಂದ ಇದರಲ್ಲಿ ಯಾವುದು ಸರಿ ಎಂಬ ಬಗ್ಗೆ ದಯಮಾಡಿ ಉತ್ತರವನ್ನು ಕೊಡಬೇಕು.

ಶ್ರೀ ಬಿ.ಕೆ. ಚಂದ್ರಶೇಖರ್ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಏಕೆ ತೊಂದರೆ ಆಯಿತು ಅಂದರೆ, ಕಳೆದ ವರ್ಷ ಫಸ್ಟ್ ಇಯರ್‌ನಲ್ಲಿ 168 ಜನ ವಿದ್ಯಾರ್ಥಿಗಳು ಇದ್ದರು, ಸೆಕೆಂಡ್ ಇಯರ್‌ನಲ್ಲಿ 110 ಜನ ವಿದ್ಯಾರ್ಥಿಗಳು ಇದ್ದರು. ಆ ಪಿ.ಯು.ಸಿ. ಕಾಲೇಜಿನಲ್ಲಿ. ಈಗ 200 ಜನ ವಿದ್ಯಾರ್ಥಿಗಳು ಹೆಚ್ಚಿಗೆ ಬಂದಿದ್ದಾರೆ. ಇದು ಬಹಳ ಸಂತೋಷದ ವಿಚಾರ. ವಿಜ್ಞಾನಕ್ಕೆ ಮತ್ತೊಂದು ಜನ ವಿದ್ಯಾರ್ಥಿಗಳು ಬರುವುದಿಲ್ಲ ಎನ್ನುವ ನಂಬಿಕೆ ನಮ್ಮಲ್ಲಿ ಬಹಳ ಜನರಿಗೆ ಇದೆ. ಅಲ್ಲಿ ಅಷ್ಟೊಂದು ಜನ ವಿದ್ಯಾರ್ಥಿಗಳು ಬಂದಿದ್ದಾರೆ. ಸದ್ಯಕ್ಕೆ ತಕ್ಷಣ ಈ ಹೆಚ್ಚುವರಿ

ಉಪಾಧ್ಯಾಯರುಗಳನ್ನು ಅಥವಾ ಅಗತ್ಯವಾದ ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಸ್ವಲ್ಪ ತೊಂದರೆ ಇರುವುದರಿಂದ ಪಕ್ಕದ ಪಾಂಡವಪುರ ಕಾಲೇಜಿನಲ್ಲಿ ಟೀಚರ್ಸ್‌ಗೆ ಅಷ್ಟು ವರ್ಕ್‌ಲೋಡ್ ಇಲ್ಲ, ಆದ್ದರಿಂದ ಅವರನ್ನು ವಾರಕ್ಕೆ ಮೂರು ದಿವಸ ಇಲ್ಲಿ ಪಾಠ ಮಾಡುವ ವ್ಯವಸ್ಥೆ ಮಾಡಿ, ಅಷ್ಟರೊಳಗೆ ಇಲ್ಲಿಗೆ ಆ ಶಿಕ್ಷಕರನ್ನು ತುಂಬುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಬಿ. ಚಂದ್ರಶೇಖರ್ :- ಮಾನ್ಯ ಅಧ್ಯಕ್ಷರೇ, ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ 6 ಹೋಬಳಿಗಳು ಇವೆ. ಅಲ್ಲಿ ಜೂನಿಯರ್ ಸೈನ್ಸ್ ಕಾಲೇಜು ಇರತಕ್ಕಂಥಾದ್ದು ಒಂದೇ ಒಂದು. ಸೈನ್ಸ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ ತಾವು ಇಂತಹ ಒಂದು ಶಾಲೆಗಳಿಗೆ ಅಡಿಷನಲ್ ಸೆಕ್ಷನ್ ಆಗಿರಬಹುದು ಮತ್ತು 1800 ಜನ ವಿದ್ಯಾರ್ಥಿಗಳು ಜೂನಿಯರ್ ಕಾಲೇಜಿನಲ್ಲಿ ಓದುತ್ತಿದ್ದಾರೆ ಇದರಲ್ಲಿ, ಸುಮಾರು 52 ಪರ್ಸೆಂಟ್‌ನಷ್ಟು ಹೆಣ್ಣು ಮಕ್ಕಳು ಆ ಜೂನಿಯರ್ ಕಾಲೇಜಿನಲ್ಲಿ ಓದುತ್ತಿರುವಂತಹ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಒಂದು ಜೂನಿಯರ್ ಕಾಲೇಜು ಗಂಡು ಮಕ್ಕಳಿಗೆ ಒಂದು ಜೂನಿಯರ್ ಕಾಲೇಜು ಎಂದು ಬೈಫರ್‌ಕೇಷನ್ ಮಾಡಿ ಕೊಟ್ಟರೆ ಆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ಕೊಟ್ಟಂತೆ ಆಗುತ್ತದೆಂದು ಈ ಸಂದರ್ಭದಲ್ಲಿ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮನವಿ ಮಾಡುತ್ತೇನೆ.

ಶ್ರೀ ಬಿ.ಕೆ. ಚಂದ್ರಶೇಖರ್ :- ಮಾನ್ಯ ಅಧ್ಯಕ್ಷರೇ, ಆ ವ್ಯವಸ್ಥೆ ಮಾಡುವ ಆಶ್ವಾಸನೆಯನ್ನು ನಾನು ಕೊಡುತ್ತೇನೆ.

ಬೈಲಹೊಂಗಲ ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡುವುದು

245 (2027) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರವು ಕಂದಾಯ ಪೋಲಿಸ್ ಹಾಗೂ ವಾಣಿಜ್ಯ ಇಲಾಖೆಗಳ ಕೇಂದ್ರ ಸ್ಥಾನವಿದ್ದು, ಈಗಾಗಲೇ ಇಲ್ಲಿರುವ 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೇ;

ಆ) ಈ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯಗಳು, ಕುಡಿಯುವ ನೀರು ಹಾಗೂ ಆಸ್ಪತ್ರೆಯನ್ನು ಶುಚಿಯಾಗಿಡಲು ಅವಶ್ಯವಿರುವ ಸಿಬ್ಬಂದಿಯನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಈ ಆಸ್ಪತ್ರೆಯಲ್ಲಿ ಎಷ್ಟು ದಿನಗಳಿಂದ ಯಾವ ಯಾವ ಹುದ್ದೆಗಳು ಖಾಲಿ ಇರುತ್ತವೆ; ಹಾಗೂ ಅವುಗಳನ್ನು ತುಂಬಲು ಯಾವ ಕ್ರಮವನ್ನು ಕೈಗೊಳ್ಳಲಾಗುವುದು;

ಈ) ಈ ಆಸ್ಪತ್ರೆಗೆ ಯಾವ ಯಾವ ಅಧಿಕಾರಿಗಳು ಯಾವ ದಿನಾಂಕಗಳಂದು ಭೇಟಿ (ವಿಜಿಟ್ ಮಾಡುವರು)?

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೆಳಗಾವಿ ಇವರಿಂದ ಪ್ರಸ್ತಾವನೆ ಬಂದಿತ್ತು.

ಆ) ಹೌದು.